## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 14-12-2022

ಹೋಕ್ರಾಣಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 95/2022 ಕಲಂ 32, 34 ಕೆ ಇ ಕಾಯ್ದೆ :-

ದಿನಾಂಕ: 13/12/2022 ರಂದು ನಂದಿಬಿಜಲಗಾಂವ ಗ್ರಾಮದ ಮಹಾದೇವ ಮಂದಿರದ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಒಂದು ಕಾಟನದಲ್ಲಿ ಅನಧಿಕೃತವಾಗಿ ಸರಾಯಿ ಬಾಟಲಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆಂದು 1530 ಗಂಟೆಗೆ ಖಚಿತ ಮಾಹಿತಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ನಂದಿಬಿಜಲಗಾಂವ ಗ್ರಾಮದ ಚಿಕ್ಕ ಹನುಮಾನ ಮಂದಿರದ ಹತ್ತಿರ ಹೋಗಿ ಮರೆಯಾಗಿ ನಿಂತ್ತು ನೋಡಲು ನಂದಿಬಿಜಲಗಾಂವ ಗ್ರಾಮದ ಮಹಾದೇವ ಮಂದಿರದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ತನ್ನ ಹತ್ತಿರ ಒಂದು ಕಾಟನ್ ಇಟ್ಟುಕೊಂಡು ಅದರಲ್ಲಿನ ಸರಾಯಿ ಬಾಟಲಗಳನ್ನು ಮಾರಾಟ ಮಾಡುತ್ತಿರುವುದನ್ನು ಖಚಿತ ಪಡೆಸಿಕೊಂಡು 1630 ಗಂಟೆಗೆ ಪಂಚರ ಸಮಕ್ಷಮ ದಾಳಿ ಮಾಡಿ ಹಿಡಿದು ಅವನಿಗೆ ವಿಚಾರಿಸಲು ಅವನು ತನ್ನ ಹೆಸರು ಲಕ್ಷ್ಮಣ ತಂದೆ ಮಾರುತಿ ಸಾಬನೆ ವಯ: 40 ವರ್ಷ ಜಾತಿ: ಕಲಾಲ ಉ: ಕೂಲಿ ಕೆಲಸ ಸಾ: ನಂದಿಬಿಜಲಗಾಂವ ಅಂತ ತಿಳಿಸಿದನು. ಸದರಿ ವ್ಯಕ್ತಿಯ ವಶದಲ್ಲಿದ್ದ ಕಾಟನ್ ಬಿಚ್ಚಿನೋಡಲು ಕಾಟನದಲ್ಲಿ ದೇಶಿ ದಾರು ಭಿಂಗ್ರಿ ಸಂತ್ರಾ ಸರಾಯಿ 180 ಎಂ.ಎಲ್ ನ ಒಟ್ಟು 36 ಬಾಟಲಗಳು ಇದ್ದು, ಒಂದರ ಬೆಲೆ 70/-ರೂ ಇದ್ದು ಒಟ್ಟು ಎಲ್ಲಾ ಸೇರಿ ಅಂ:ಕಿ: 2520/-ರೂ ಇರುತ್ತದೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.